ದಿನಾಂಕಃ 09.11.2023 ರಂದು ಪ್ರಮಾಣ ವಚನ ಭೋದಿಸಲಾಯಿತುಃ

**ಪಾಟೀ ಸವಾಲು 2 ಮತ್ತು 3ನೇ ಪ್ರತಿವಾದಿ ಪರ ವಕೀಲರಿಂದ ಃ**

ವಾದಿ ನನಗೆ ತಾಯಿಯಾಗಬೇಕು. ವಾದಿ ಭಾಗಕ್ಕಾಗಿ ದಾವೆ ಸಲ್ಲಿಸಿರುತ್ತಾರೆ. ದಾವೆಯನ್ನು 5 ಸ್ವತ್ತುಗಳ ಮೇಲೆ ಸಲ್ಲಿಸಿರುತ್ತಾರೆ. ಅವುಗಳ ಸ. ನಂ. 94, 68/2, 82/1, ಜಂಜರ್ ನಂ. 53 ಮತ್ತು 53/1. ವಾದಿಗೆ 2-3 ಆಪರೇಶನ್ ಆಗಿದೆ, ಅವರಿಗೆ ಏಳುವುದಕ್ಕೆ ಆಗುವುದಿಲ್ಲ ಆದ ಕಾರಣ ನನ್ನ ತಾಯಿ ನನಗೆ ಜಿಪಿಎ ಅನ್ನು ನೀಡಿರುತ್ತಾರೆ. ನನ್ನ ತಾಯಿಗೆ ಯಾವುದೇ ಆಪರೇಶನ್ ಆಗಿಲ್ಲ , ನನ್ನ ತಾಯಿ ಆರೋಗ್ಯವಾಗಿದ್ದರೂ ಸಹ ಆರೋಗ್ಯ ಸರಿ ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಸಾಕ್ಷಿ ಪ್ರಮಾಣ ಪತ್ರಕ್ಕೆ ಮಾಹಿತಿಯನ್ನು ನಾನೇ ಹೇಳಿ ಬರೆಸಿರುತ್ತೇನೆ.

ನನ್ನ ತಾಯಿಯ ತಂದೆಗೆ ಅಂದರೆ ನನ್ನ ತಾತನಿಗೆ 5 ಜನ ಮಕ್ಕಳು. ಅವರುಗಳ ಹೆಸರುಗಳು- ಪ್ರೇಮಮ್ಮ, ರಮಾದೇವಿ, ಪಾರ್ವತಿ, ವೆಂಕಟಲಕ್ಷ್ಮಿ ಮತ್ತು ಅರುಣ. ನನ್ನ ತಾತ ರಾಜಣ್ಣನಿಗೆ ಇನ್ನೂ ಒಂದು ಹೆಣ್ಣು ಮಗಳು ಸಾವಿತ್ರಿ ಎಂಬಾಕೆ ಇದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಅವರು ವಾರಸುದಾರಳಾಗಿದ್ದರೂ ಸಹ ಆಕೆಯನ್ನು ಕೇಸಿಗೆ ಸೇರಿಸಿಲ್ಲ ಎಂದರೆ ಆಕೆ ನಮಗೆ ಗೊತ್ತಿಲ್ಲ. ಪ್ರತಿವಾದಿಯ ಪರ ವಕೀಲರು ನಾನ್ ಜಾಯಿಂಡರ್ ಪ್ಲೀಡಿಂಗ್ ತೆಗೆದುಕೊಂಡಿಲ್ಲ ಎನ್ನುತ್ತಾರೆ, ಆದ ಕಾರಣ ಸದರಿ ಪ್ರಶ್ನೆ ಸಮಂಜಸವಲ್ಲ ಎನ್ನುತ್ತಾರೆ. ನನ್ನ ತಾತನಿಗೆ ಎಲ್ಲಾ ಹೆಣ್ಣು ಮಕ್ಕಳು ಇದ್ದು, ಗಂಡು ಸಂತಾನ ಇಲ್ಲ ಎಂದರೆ ಹೌದು. 2ನೇ ಪ್ರತಿವಾದಿ ದೊಮ್ಮಲೂರು ಗ್ರಾಮದಲ್ಲಿ ವಾಸ ಎಂದರೆ ಸರಿಯಲ್ಲ. 2ನೇ

ಪ್ರತಿವಾದಿಯೇ ಅವರ ತಂದೆ ತಾಯಿಯ ಯೋಗಕ್ಷೇಮವನ್ನು ನೋಡಿಕೊಳ್ಳುತ್ತಿದ್ದರು ಎಂದರೆ ಸರಿಯಲ್ಲ. ದಾವಾ 1ನೇ ಐಟಂ ನನ್ನ ತಾಯಿಯ ತಾಯಿ- ವೆಂಕಟಮ್ಮನಿಗೆ ಅವರು ತವರು ಮನೆಯಿಂದ ಬಂದ ಸ್ವತ್ತು ಆಗಿದ್ದು, ಸದರಿ ಸ್ವತ್ತು ಆಕೆಯ ಸ್ವಯಾರ್ಜಿತ ಸ್ವತ್ತು ಎಂದರೆ ಸರಿಯಲ್ಲ. ಸದರಿ ವೆಂಕಟಮ್ಮ ದಾವಾ 1ನೇ ಸ್ವತ್ತನ್ನು 2ನೇ ಪ್ರತಿವಾದಿಗೆ ದಿಃ 08.11.2012ರಂದು 2ನೇ ಪ್ರತಿವಾದಿಗೆ ಮಾತ್ರ ದಾನ ಮಾಡಿದ್ದಾರೆ ಎಂದರೆ ಸಾಕ್ಷಿಯು ಬೇರೆಯವರ ಹಕ್ಕನ್ನು ಕಸಿದುಕೊಳ್ಳಬೇಕೆಂದು ಮೋಸದಿಂದ ದಾನ ಪತ್ರವನ್ನು ಮಾಡಿಸಿಕೊಂಡಿರುತ್ತಾರೆ. ಪಹಣಿ ಮತ್ತು ಖಾತೆ ದಾನ ಪತ್ರದ ಆಧಾರದ ಮೇಲೆ 2ನೇ ಪ್ರತಿವಾದಿ ಹೆಸರಿಗೆ ಆಗಿದೆ ಎಂದರೆ ಮೋಸದಿಂದ ಮಾಡಿಕೊಳ್ಳಲಾಗಿದೆ ಎನ್ನುತ್ತಾರೆ. ರೆವಿನ್ಯೂ ನ್ಯಾಯಾಲಯದಲ್ಲಿ ಸದರಿ ಎಂ. ಆರ್. ಅನ್ನು ಪ್ರಶ್ನಿಸಿರುವುದಿಲ್ಲ. 2ನೇ ಪ್ರತಿವಾದಿಗೆ ದಾವಾ 1ನೇ ಸ್ವತ್ತಿನ ಎಲ್ಲಾ ಹಕ್ಕು ಇದೆ, ನಮಗೆ ಇಲ್ಲ ಎಂದರೆ ಎಲ್ಲಾ ಮೋಸದಿಂದ ಮಾಡಿರುತ್ತಾರೆ. ದಾವಾ ಬಿ ಶೆಡ್ಯೂಲ್ ಜಂಜರ್ ನಂ. 53 ಅನ್ನು ವಾದಿಯ ತಂದೆ ರಾಜಣ್ಣ ಖರೀದಿ ಮಾಡಿದ್ದು, ಅದು ಆತನ ಸ್ವಯಾರ್ಜಿತ ಸ್ವತ್ತು ಎಂದರೆ ಸರಿಯಲ್ಲ, ಸದರಿ ಸ್ವತ್ತನ್ನು ದಿಃ 04.12.2006ರಲ್ಲಿ ರಾಜಣ್ಣರವರ ಹೆಂಡತಿ- 2ನೇ ಪ್ರತಿವಾದಿಗೆ ವಿಲ್ ಮಾಡಿರುತ್ತಾರೆ ಹಾಗೂ ಅದನ್ನು ತಿಳಿದುಕೊಂಡಿರುತ್ತೀರಾ ಎಂದರೆ ಮೋಸ ಮಾಡಿರುತ್ತಾರೆ ಎನ್ನುತ್ತಾರೆ. ವಿಲ್‌ನ ಆಧಾರದ ಮೇಲೆ ಪಂಚಾಯಿತಿಯಲ್ಲಿ 2ನೇ ಪ್ರತಿವಾದಿಯ ಹೆಸರಿಗೆ ಆಗಿದೆ ಎಂದರೆ ಅವರು ಮೋಸ ಮಾಡಿರುತ್ತಾರೆ ಎನ್ನುತ್ತಾರೆ, ಸದರಿ ಸ್ವತ್ತಿನಲ್ಲಿ 2ನೇ ಪ್ರತಿವಾದಿ ಮನೆಯನ್ನು ದೊಮ್ಮಲೂರು ಗ್ರಾಮದಲ್ಲಿ ಕಟ್ಟಿಕೊಂಡು ವಾಸ ಇದ್ದಾರೆ ಎಂದರೆ ಮೋಸ

ಮಾಡಿರುತ್ತಾರೆ ಎನ್ನುತ್ತಾರೆ. ದಾವಾ ಎ ಶೆಡ್ಯೂಲ್‌ನ 2ನೇ ಸ್ವತ್ತು ಅನ್ನು ವಾದಿ ಮತ್ತು ಪ್ರತಿವಾದಿಗಳ ತಂದೆ ತಾಯಿ ಸೇರಿ 5ನೇ ಪ್ರತಿವಾದಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಮೋಸ ಮಾಡಿ ಮಾರಾಟ ಮಾಡಿರುತ್ತಾರೆ, ಸದರಿ ಸ್ವತ್ತಿನಲ್ಲಿ ನನ್ನ ತಾಯಿಗೆ ಮತ್ತು ಪ್ರತಿವಾದಿಗಳಿಗೆ ಹಕ್ಕು ಇತ್ತು ಎಂದರೆ ಹೌದು, ಸದರಿ ಮಾರಾಟಕ್ಕೆ ವಾದಿ ಮತ್ತು ಪ್ರತಿವಾದಿಗಳೆಲ್ಲರೂ ಸಹಿ ಮಾಡಿಲ್ಲ ಎಂದರೆ ಹೌದು. ದಾವಾ ಬಿ ಶೆಡ್ಯೂಲ್‌ನ 2ನೇ ಸ್ವತ್ತು 2ನೇ ಪ್ರತಿವಾದಿಯ ಸ್ವಯಾರ್ಜಿತ ಎಂದರೆ ಸರಿಯಲ್ಲ, ಸದರಿ ಸ್ವತ್ತು 2ನೇ ಪ್ರತಿವಾದಿಯ ಹೆಸರಿಗೆ ಪಂಚಾಯಿತಿಯಲ್ಲಿ ಇ-ಖಾತೆ, ಪಹಣಿ ಬರುತ್ತಿದೆ ಎಂದರೆ ಸರಿಯಲ್ಲ.

**ಮುಂದುವರಿದ ಪಾಟೀ ಸವಾಲನ್ನು ಕೋರಿಕೆ ಮೇರೆಗೆ ಮುಂದೂಡಲಾಗಿದೆಃ**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಗಿದೆ.)**

ಓ.ಹೇ ಕೇ ಸರಿ ಇದೆ.

ಸಹಿ/-

**(ಲತಾದೇವಿ ಜಿ.ಎ)**
ಹಿರಿಯ ಸಿವಿಲ್ ನ್ಯಾಯಾಧೀಶರು,
ಮಾಲೂರು.